# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೦೮, ಜನವರಿ, ೨೦೨೬(ಪುಷ್ಯ, ೧೮, ಶಕವರ್ಷ, ೧೯೪೭)<br>BENGALURU, THURSDAY, 08, JANUARY, 2026(PUSHYA , 18, SHAKAVARSHA, 1947) | ನಂ. ೩೦<br>No.30 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 80 ಶಾಸನ 2025, ಬೆಂಗಳೂರು, ದಿನಾಂಕ: 08.01.2026**

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2026 ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 15 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 15

(2026ರ ಜನವರಿ ತಿಂಗಳ 8ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025

(2026ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ,-

(i) (ಸಿ) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ-1) "ಸಮಿತಿ" ಎಂದರೆ, 17ಎ ಪ್ರಕರಣದಡಿ ರಚಿಸಲಾದ ಜಿಲ್ಲಾ ಮಟ್ಟದ ಸಮಿತಿ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ".

(ii) (ಎಚ್) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(i) "ನಿಯಮಗಳು" ಎಂದರೆ ಈ ಅಧಿನಿಯಮದಡಿ ರಚಿಸಿದ ನಿಯಮಗಳು".

**3. ಪ್ರಕರಣ 3ರ ತಿದ್ದುಪಡಿ.-** ಮೂಲ ಅಧಿನಿಯಮದ, 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ,-

(i) (ಜಿ) ಖಂಡದಲ್ಲಿ, "ಲೋಕೋಪಯೋಗಿ ಇಲಾಖೆ", ಎಂಬ ಪದಗಳ ತರುವಾಯ "ಅಥವಾ ಕಾರ್ಯಪಾಲಕ ಅಭಿಯಂತರರ ದರ್ಜೆಗೆ ಕಡಿಮೆಯಲ್ಲದ ಆತನ ಪ್ರತಿನಿಧಿ", ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (ಎಚ್) ಖಂಡದಲ್ಲಿ, "ಅಥವಾ ಅವರ ನಾಮನಿರ್ದೇಶಿತರು" ಎಂಬ ಪದಗಳ ಬದಲಾಗಿ "ಅಥವಾ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಆತನ ಪ್ರತಿನಿಧಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (ಜೆ-2) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-3) ಸರ್ಕಾರವು ನಾಮನಿರ್ದೇಶಿಸಿದ ವಿಗ್ರಹ ಶಾಸ್ತ್ರಗಳು ಮತ್ತು ದೇವಾಲಯದ ಮೂಲ ಸ್ವರೂಪದ ಹಲವು ವಿಧಗಳ ಶೈಲಿ, ಪ್ರಮುಖ ರೂಪವಾಗಿ ವಿಶ್ವಕರ್ಮ ವಾಸ್ತುಶಿಲ್ಪದ ವಿನ್ಯಾಸಗಳುಳ್ಳ ಹಿಂದೂ ದೇವಾಲಯ ವಾಸ್ತುಶಿಲ್ಪದ ಗುರುತರ ಜ್ಞಾನವನ್ನು ಹೊಂದಿರುವ ಒಬ್ಬ ವ್ಯಕ್ತಿ".

**4. ಪ್ರಕರಣ 8ರ ತಿದ್ದುಪಡಿ.-** ಮೂಲ ಅಧಿನಿಯಮದ 8ನೇ ಪ್ರಕರಣದ (2)ನೇ ಉಪಪ್ರಕರಣದ, (ಬಿ) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) ಪ್ರಾಧಿಕಾರವು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ ಸಂ. 33)ರ ಉಪಬಂಧಗಳಡಿಯಲ್ಲಿ ಅಧಿಸೂಚಿಸಲಾದಂತೆ "ಸಿ" ಪ್ರವರ್ಗದ ದೇವಸ್ಥಾನಗಳನ್ನು ದತ್ತು ತೆಗೆದುಕೊಳ್ಳುವ ಯೋಜನೆಯನ್ನು ಅನುಮೋದಿಸಬಹುದು ಮತ್ತು ಸದರಿ ದತ್ತು ತೆಗೆದುಕೊಳ್ಳಲು ಅಗತ್ಯವಾದ ಉಪಬಂಧಗಳನ್ನು ನಿರ್ದಿಷ್ಟಪಡಿಸಬಹುದು".

**5. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 10ನೇ ಪ್ರಕರಣದ, (1)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ರಾಜ್ಯ ಸರ್ಕಾರವು, ಧರ್ಮಾದಾಯ ಇಲಾಖೆಯ ಎ-ದರ್ಜೆಯ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ಮತ್ತು ಧರ್ಮಾದಾಯ ಇಲಾಖೆಯ ಬಿ-ದರ್ಜೆಯ ಅಧಿಕಾರಿಯನ್ನು ಪ್ರಾಧಿಕಾರದ ಉಪಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು.

**6. 12ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 12ನೇ ಪ್ರಕರಣದ, (1)ನೇ ಉಪಪ್ರಕರಣದ, ಎರಡನೇ ಪರಂತುಕಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ರಾಜ್ಯ ಸರ್ಕಾರವು ಪ್ರಾಧಿಕಾರವು ಕೈಗೊಳ್ಳುವ ಕಾಮಗಾರಿಗಳ ನಿರ್ವಹಣೆಗಾಗಿ ಲೋಕೋಪಯೋಗಿ ಇಲಾಖೆಯಿಂದ ಕಾರ್ಯಪಾಲಕ ಅಭಿಯಂತರರನ್ನು ನಿಯೋಜನೆ ಮೇಲೆ ನೇಮಕ ಮಾಡತಕ್ಕದ್ದು ಹಾಗೂ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆಯಿಂದ ``ಎ'' ದರ್ಜೆಗೆ ಕಡಿಮೆಯಲ್ಲದ ಲೆಕ್ಕಾಧಿಕಾರಿಯನ್ನು ಸಹ ನಿಯೋಜನೆಯ ಮೇಲೆ ನೇಮಕ ಮಾಡತಕ್ಕದ್ದು.

ಅಲ್ಲದೆ ಪರಂತು, ಕಾರ್ಯಪಾಲಕ ಅಭಿಯಂತರರು ದುರಸ್ತಿ ಕಾಮಗಾರಿಗಳ ಪ್ರಗತಿ ಪುನರೀಕ್ಷಣೆ, ನೀತಿ ನಿರ್ಣಯಗಳು, ಆಧುನಿಕ ತಂತ್ರಜ್ಞಾನದ ಪರಿಚಯ, ಆಯವ್ಯಯದ ಹಂಚಿಕೆ, ಆಯವ್ಯಯದ ಪುನರೀಕ್ಷಣೆ, ಹೊರಗಿನ ಎಲ್ಲಾ ಸಂಸ್ಥೆಗಳೊಂದಿಗೆ ಸಮನ್ವಯ ಮತ್ತು ಗುಣಮಟ್ಟದ ಪರೀಕ್ಷೆಗಾಗಿ ಇಷ್ಟಾನುಸಾರ ಸ್ಥಳ ಪರಿಶೀಲನೆಯ ಸಮಗ್ರ ಮೇಲ್ವಿಚಾರಣೆ ಹಾಗೂ ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಬರುವ ಕಟ್ಟಡಗಳ ನಿರ್ಮಾಣ ಅಥವಾ ನವೀಕರಣಕ್ಕೆ ನಿರಾಕ್ಷೇಪಣಾ ಪತ್ರವನ್ನು ಹೊರಡಿಸುವ ಜವಾಬ್ದಾರಿ ಹೊಂದಿರತಕ್ಕದ್ದು."

**7. 17-ಎ ಹೊಸ ಪ್ರಕರಣ ಸೇರ್ಪಡೆ.-** ಮೂಲ ಅಧಿನಿಯಮದ 17ನೇ ಪ್ರಕರಣದ ತರುವಾಯ, ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

**"17-ಎ. ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ.-** (1) ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಭಕ್ತಾದಿಗಳಿಗೆ ಸುರಕ್ಷತೆಯನ್ನು ಒದಗಿಸಲು ಮತ್ತು ಭಕ್ತಾದಿಗಳಿಗೆ ಅಗತ್ಯ ಸೌಲಭ್ಯಗಳಾದ ಕಟ್ಟಡಗಳು, ರಸ್ತೆಗಳು ಮತ್ತು ಸುರಂಗ ಮಾರ್ಗಗಳು, ವಿದ್ಯುಚ್ಛಕ್ತಿ ಪೂರೈಕೆ ಮತ್ತು ನಿರ್ವಹಣೆ, ನೀರು ಪೂರೈಕೆ ಮತ್ತು ನೈರ್ಮಲ್ಯೀಕರಣ, ಮನೋರಂಜನಾ ಕೇಂದ್ರಗಳ ನಿರ್ಮಾಣ ಮತ್ತು ಗ್ರಂಥಾಲಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪುನರೀಕ್ಷಿಸಲು ಮತ್ತು ಸಲ್ಲಿಸಲು ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಜಿಲ್ಲಾ ಮಟ್ಟದ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಅಧ್ಯಕ್ಷರು |
| (ಬಿ) | ಪೊಲೀಸು ಅಧೀಕ್ಷಕರು, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |

| | | |
|---|---|---|
| (ಸಿ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಡಿ) | ಅರಣ್ಯ ಉಪ ಸಂರಕ್ಷಣಾಧಿಕಾರಿ ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಇ) | ಅಧಿಕಾರವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಎಫ್) | ಉಪವಿಭಾಗಾಧಿಕಾರಿ, ಕೊಳ್ಳೆಗಾಲ ಉಪವಿಭಾಗ | ಪದನಿಮಿತ್ತ ಸದಸ್ಯರು |
| (ಜಿ) | ತಹಶೀಲ್ದಾರರು, ಹನೂರು ತಾಲ್ಲೂಕು | ಪದನಿಮಿತ್ತ ಸದಸ್ಯರು |
| (ಎಚ್) | ಕಾರ್ಯನಿರ್ವಹಣಾಧಿಕಾರಿ, ಹನೂರು ತಾಲ್ಲೂಕು ಪಂಚಾಯಿತಿ | ಪದನಿಮಿತ್ತ ಸದಸ್ಯರು |
| (ಐ) | ಅಧಿಕಾರವ್ಯಾಪ್ತಿಯ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯರು |
| (ಜೆ) | ಶ್ರೀ ಸಾಲೂರು ಮಠದ ಪೀಠಾಧಿಪತಿ, ಮಲೈ ಮಹದೇಶ್ವರ ಬೆಟ್ಟ ಅಥವಾ ಅವರ ಪ್ರತಿನಿಧಿ | ಸದಸ್ಯರು |
| (ಕೆ) | ಅಧಿಕಾರವ್ಯಾಪ್ತಿಯ ಸಹಾಯಕ ನಿರ್ದೇಶಕರು, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆ | ಪದನಿಮಿತ್ತ ಸದಸ್ಯರು |
| (ಎಲ್) | ಅಧಿಕಾರವ್ಯಾಪ್ತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಹದೇಶ್ವರ ಬೆಟ್ಟ | ಪದನಿಮಿತ್ತ ಸದಸ್ಯರು |
| (ಎಂ) | ಪ್ರಾಧಿಕಾರದ ಕಾರ್ಯದರ್ಶಿ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(3) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು, ಪ್ರಾಧಿಕಾರದ ಅಧಿಕಾರವ್ಯಾಪ್ತಿಯಲ್ಲಿ ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕಾಮಗಾರಿಗಳು ಅಥವಾ ಪ್ರಸ್ತಾವನೆಗಳಿಗಾಗಿ ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಗೆ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು .

(4) ರಾಜ್ಯ ಮಟ್ಟದ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ) | ಪದನಿಮಿತ್ತ ಅಧ್ಯಕ್ಷರು |
| (ಬಿ) | ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ | ಪದನಿಮಿತ್ತ ಸದಸ್ಯರು |
| (ಸಿ) | ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಪದನಿಮಿತ್ತ ಸದಸ್ಯರು |

| | | |
|---|---|---|
| (ಡಿ) | ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ | ಪದನಿಮಿತ್ತ ಸದಸ್ಯರು |
| (ಇ) | ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | ಪದನಿಮಿತ್ತ ಸದಸ್ಯರು |
| (ಎಫ್) | ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಜಿ) | ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಎಚ್) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಐ) | ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯರು |
| (ಜೆ) | ನಿರ್ದೇಶಕರು, ಗ್ರಾಮೀಣ ನೀರು ಸರಬರಾಜು ಇಲಾಖೆ, ಬೆಂಗಳೂರು | ಪದನಿಮಿತ್ತ ಸದಸ್ಯರು |
| (ಕೆ) | ಪ್ರಾಧಿಕಾರದ ಕಾರ್ಯದರ್ಶಿ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(5) ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯು ಜಿಲ್ಲಾ ಮಟ್ಟದ ಸಮಿತಿಯ ಮೂಲಕ ಸಲ್ಲಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸತಕ್ಕದ್ದು ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡತಕ್ಕದ್ದು.

(6) ಜಿಲ್ಲಾ ಮಟ್ಟದ ಸಮಿತಿ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯು ಕನಿಷ್ಠ ಮೂರು ತಿಂಗಳಿಗೆ ಒಮ್ಮೆಯಾದರೂ ನಿಯಮಿಸಬಹುದಾದ ಅಂಥ ಸ್ಥಳ ಮತ್ತು ಅಂಥ ಸಮಯದಲ್ಲಿ ಸಭೆ ಸೇರತಕ್ಕದ್ದು ಮತ್ತು ಅಂಥ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳತಕ್ಕದ್ದು.

**8. 18ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 18ನೇ ಪ್ರಕರಣದ, (2)ನೇ ಉಪಪ್ರಕರಣದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) 12ನೇ ಪ್ರಕರಣದ (1)ನೇ ಉಪ-ಪ್ರಕರಣಕ್ಕೆ ಒಳಪಟ್ಟು ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ದೇವಸ್ಥಾನದ ನೌಕರರ ನಿರ್ವಹಣೆಯು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು."

**9. 19ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 19ನೇ ಪ್ರಕರಣದ, (1)ನೇ ಉಪಪ್ರಕರಣದ, (ಪಿ) ಖಂಡದ ತರುವಾಯ, ಈ ಮುಂದಿನ ಹೊಸ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

"(ಪಿ-1) ಪ್ಲಾಸ್ಟಿಕ್ ಪರಿಸರನಾಶವನ್ನು ತಡೆಯುವುದಕ್ಕಾಗಿ ಪ್ಲಾಸ್ಟಿಕ್ ಕಿವಿ ಸ್ವಚ್ಛಗೊಳಿಸುವ ಕಡ್ಡಿಗಳು, ಬಲೂನುಗಳ ಪ್ಲಾಸ್ಟಿಕ್ ಕಡ್ಡಿಗಳು, ಪ್ಲಾಸ್ಟಿಕ್ ಬಾವುಟಗಳು, ಮಿಠಾಯಿ ಕಡ್ಡಿಗಳು, ಐಸ್

ಕ್ರೀಂ ಕಡ್ಡಿಗಳು, ಅಲಂಕಾರಕ್ಕಾಗಿ ಥರ್ಮಾಕೋಲು, ತಟ್ಟೆಗಳು, ಬಟ್ಟಲುಗಳು, ಲೋಟಗಳು, ಮುಳ್ಳು ಚಮಚಗಳು, ಚಮಚಗಳು, ಚಾಕುಗಳು, ಪೈಪುಗಳು, ತಟ್ಟೆಗಳಂಥ ಚಾಕುಚಮಚಗಳು, ಸಿಹಿತಿಂಡಿ ಪೊಟ್ಟಣಗಳ ಸುತ್ತ ಹೊದಿಯುವ ಅಥವಾ ಕಟ್ಟುವ ಹೊದಿಕೆ, ಆಹ್ವಾನ ಪತ್ರಿಕೆಗಳು, ಸಿಗರೇಟು ಡಬ್ಬಿಗಳು, 100 ಮೈಕ್ರೋನ್‌ಗಳಿಗಿಂತ ಕಡಿಮೆಯ ಪ್ಲಾಸ್ಟಿಕ್ಕಿನ ಅಥವಾ ಪಿವಿಸಿ ಪಟಗಳು (ಬ್ಯಾನರ್), ಚಿಂದಿ ಆರಿಸು (ಸ್ಟಿರರ್ಸ್) ವವರನ್ನು ಪ್ರಾಧಿಕಾರದ ಪ್ರದೇಶದಲ್ಲಿ ಪ್ರತಿಬಂಧಿಸುವುದು;

(ಪಿ-2) ಪ್ರಾಧಿಕಾರದ ಪ್ರದೇಶದಲ್ಲಿ ವರ್ಷ ಪೂರ್ತಿ, ಎಲ್ಲರಿಗೂ ಸುರಕ್ಷಿತ ಮತ್ತು ಸ್ವಚ್ಛ ನೀರು ಮತ್ತು ಶೌಚ ಸೌಲಭ್ಯದ ಲಭ್ಯತೆಯನ್ನು ಖಚಿತಪಡಿಸುವುದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT
## NOTIFICATION
## NO.DPAL 80 SHASHANA 2025, BENGALURU, DATED:08.01.2026

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ:15) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ACT NO. 15 OF 2026

(First Published in the Karnataka Gazette Extra-ordinary on the 8th day of January, 2026)

### SRI MALAI MAHADESWARASWAMY KSHETHRA DEVELOPMENT AUTHORITY (AMENDMENT) ACT, 2025

(Received the assent of the Governor on the 7th day of January, 2026)

An Act further to amend Sri Malai Mahadeswaraswamy Kshethra Development Authority Act, 2013.

Whereas it is expedient to amend the Sri Malai Mahadeswaraswamy Kshethra Development Authority Act, 2013 (Karnataka Act No. 37 of 2013), for the purpose hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.-** (1) This Act may be called Sri Malai Mahadeswaraswamy Kshethra Development Authority (Amendment) Act, 2025.

(2) It shall come into force at once.

**2. Amendment of section 2.-** In the Sri Malai Mahadeswaraswamy Kshethra Development Authority Act, 2013 (Karnataka Act No. 37 of 2013) (hereinafter referred to as the Principal Act), in section 2,-

(i) after clause (c), the following new clause shall be inserted, namely:-
"(C-1) "Committee" means the District Level Committee and the State Level Monitoring Committee constituted under section 17A".

(ii) after clause (h), the following new clause shall be inserted, namely:-
"(i) "Rules" means rules made under this Act".

**3. Amendment of section 3.-** In the Principal Act, in section 3, in sub-section (4),-

(i) in clause (g), after the words "Public Works Department", the words "or his representative not below the rank of Executive Engineer", shall be inserted;

(ii) in clause (h), for the words "or his nominee" the words "or his representative not below the rank of Deputy Secretary to Government", shall be substituted.

(iii) after clause (J-2), the following new clause shall be inserted, namely:-

"(J-3) One person who is nominated by the Government, having prominent knowledge of Hindu temple architecture mainly the form of Vishwakarma architecture and many varieties of style, designs of vigraha shastras and basic nature of temple".

**4. Amendment of section 8.-** In the Principal Act, in section 8, in sub-section (2), after clause (b), the following new clause shall be inserted, namely:-

"(c) The Authority may approve a scheme for adoption of "C" category temples as notified under the provisions of the Karnataka Hindu Religious Institutions and Charitable Endowments Act, 1997 (Karnataka Act No. 33 of 2001) and may specify necessary provisions for the said adoption".

**5. Amendment of section 10.-** In the Principal Act, in section 10, for sub-section (1), the following shall be substituted, namely:-

"(1) The State Government shall appoint an officer from the cadre of Group-A Senior scale Officer of the Endowment Department as the Secretary of the Authority and a Group 'B' Officer of the Endowment Department as the Deputy Secretary of the Authority".

**6. Amendment of section 12.-** In the Principal Act, in section 12, in sub-section (1), for the second proviso, the following shall be substituted, namely:-

"Provided further that, the State Government shall appoint an Executive Engineer on deputation from the Public Works Department for maintenance of works taken up by the Authority and also, the State Government shall appoint an Accounts Officer not below the rank of Group 'A' Officer on deputation from the Karnataka State Audit and Accounts Department.

Provided also that, the Executive Engineer shall be responsible for the overall monitoring of progress review of repair works, policy decisions, introduction of new technology, Budget allocation, review of budget, co-ordination with all external agencies and random site inspection for quality check and issuances of No Objection Certificate to construction or renovations of the buildings coming under jurisdiction of the Authority."

**7. Insertion of new section 17-A.-** In the Principal Act, after section 17, the following new section shall be inserted, namely:-

" **17-A. District Level and State Level Monitoring Committee.-** (1) There shall be constituted a District level committee and a State level Monitoring committee to review and submit the proposal regarding construction and maintenance of buildings, roads and tunnels, electricity supply and maintenance, water supply and sanitation, construction of recreation centre and libraries to provide necessary facilities to pilgrims and to provide safety to pilgrims within the jurisdiction of the Authority.

(2) The District level monitoring committee shall consist of the following members, namely:-

| | | |
|---|---|---|
| (a) | The Deputy Commissioner, Chamarajanagar district | Ex-officio Chairman |
| (b) | The Superintendent of Police, Chamarajanagar district | Ex-officio member |
| (c) | The Chief Executive Officer, Zilla Panchayat, Chamarajanagar district | Ex-officio member |
| (d) | The Deputy Conservator of forest Chamarajanagar District | Ex-officio member |
| (e) | The Jurisdictional Executive Engineer, Public Works Department, Chamarajanagar District | Ex-officio member |
| (f) | The Assistant Commissioner, Kollegal Sub-Division | Ex-officio member |
| (g) | The Tahsildar, Hanur taluk | Ex-officio member |
| (h) | The Executive Officer, Taluk Panchayat, Hanur | Ex-officio member |
| (i) | The jurisdictional Assistant Director, Tourism Department | Ex-officio member |
| (j) | The Peethadhipathi of Sri Salurumath, Malai Mahadeswara Hills or his representative. | member |
| (k) | The jurisdictional Assistant Director, Town and Country Planning Department | Ex-officio member |
| (l) | The jurisdictional Panchayath Development officer, Mahadeswara Betta. | Ex-officio member |
| (m) | The Secretary of the Authority | Ex-officio member Secretary |

(3) The District Level Monitoring Committee shall submit suitable proposals to the State Level Monitoring Committee for the works or proposals to be undertaken in respect of their Departments within the jurisdiction of the Authority.

(4) The State Level Monitoring Committee shall consist of the following members, namely:-

| | | |
|---|---|---|
| (a) | The Principal Secretary to Government, Revenue Department (Muzrai) | Ex-officio Chairman |
| (b) | The Commissioner, Hindu Religious Institutions and Charitable Endowment Department | Ex-officio member |
| (c) | The Chief Engineer, Public Works Department | Ex-officio member |
| (d) | The Managing Director, Chamundeshwari Electricity Supply Company. | Ex-officio member |
| (e) | The Chief Engineer, Karnataka Urban Water Supply and Sewerage Board | Ex-officio member |
| (f) | The Deputy Commissioner, Chamarajanagar District | Ex-officio member |
| (g) | The superintendent of Police, Chamarajanagar District | Ex-officio member |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | |
|---|---|---|
| (h) | The Chief Executive Officer, Zilla Panchayat, Chamarajanagar District | Ex-officio member |
| (i) | The Director, Tourism Department | Ex-officio member |
| (j) | The Director, Rural water supply Department, Bengaluru, | Ex-officio member |
| (j) | The Secretary of the Authority | Ex-officio member Secretary |

(5) The State level Monitoring Committee shall scrutinize the proposals submitted by the District level Committee and recommend the Authority on all matters relating to the development of Sri Malai Mahadeswaraswamy Kshethra.

(6) The District level Committee and the State level Monitoring Committee shall meet at least once in three months at such place and at such time and shall adopt such procedure as may be prescribed.

**8. Amendment of section 18.-** In the Principal Act, in section 18, for sub-section (2), the following shall be substituted, namely:-

"(2) Subject to sub- section (1) of section 12 on and from the date of commencement of Sri Malai Mahadeswaraswamy Kshethra Development Authority (Amendment) Act, 2025 the management of the employees of the Temple shall vest in the Authority".

**9. Amendment of section 19.-** In the Principal Act, in section 19, in sub-section (1),after clause (p), the following new clauses shall be inserted, namely:-

"(p-1) prohibition of ear buds with plastic sticks, plastic sticks for balloons, plastic flags, candy sticks, ice cream sticks, polystyrene (Thermocol) for decoration, plates, cups, glasses, cutlery such as forks, spoons, knives, straw, trays, wrapping or packing films around sweet boxes, invitation cards and cigarette packets, plastic or PVC banners less than 100 micron, stirrers in the area of the Authority for avoiding the plastic pollution;

(p-2) ensuring availability of safe and secure water and sanitation facilities for all, throughout the year, in the area of the Authority".

The above translation of ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 15) be published in the official Gazette under clause (3) of Article 348 of the constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH